

ಎಂ.ಎಸ್. ಆಶಾದೇವಿ

# ಶ್ರಮಮೂಲ ಸಂಸ್ಕೃತಿಯ ಕಟ್ಟೋಣ ಮಹಿಳಾ ಸಂಕಥನದ ಘನವಾದ ಕೃತಿ

ಎಚ್.ಆರ್. ಸುಜಾತಾ ಅವರ 'ಮಣಿಬಾಲೆ' ಕಾದಂಬರಿ ನಿಂತ ಹೆಜ್ಜೆಯನ್ನು ಅರಿಯುವುದಕ್ಕಿಂತ ಹೆಚ್ಚಾಗಿ, ಹಿಂದಣ ಹೆಜ್ಜೆಯನ್ನು ಮುಂದಣ ಹೆಜ್ಜೆಯನ್ನು ಒಟ್ಟಾಗಿ ಹಿಡಿಯುವ ಮಹತ್ವಾಕಾಂಕ್ಷೆಯ ಕೃತಿ. 'ಮಣಿಬಾಲೆ' ಎನ್ನುವ ಸ್ತ್ರೀಪಾತ್ರವು ಬಾಲೆಯಾಗಿ, ತರುಣಿಯಾಗಿ, ಮಧ್ಯವಯಸ್ಕಳಾಗಿ, ಅಜ್ಜಮ್ಮನಾಗಿ ಹೆಣ್ಣಿನ ಎಲ್ಲ ವಯೋಮಾನಗಳನ್ನೂ ಪರಕಾಯ ಪ್ರವೇಶ ಮಾಡುವಂತೆ ಕಾಣುತ್ತಲೇ, ಅವರನ್ನೂ ತನ್ನನ್ನೂ ಲೋಕವನ್ನೂ ಚರಿತ್ರೆಯನ್ನೂ ಸಾಂಸ್ಕೃತಿಕ ಪರಂಪರೆಯನ್ನೂ ಒಳಗೊಳ್ಳಲು ತವಕಿಸುತ್ತಾಳೆ. ಕಣ್ಣಿಗೆ ನಿಲುಕುವ ಮಾತ್ರವಲ್ಲ, ಮೂರ್ತವಾಗಿ ದಕ್ಕದೆ ಅಮೂರ್ತ ನೆಲೆಯಲ್ಲಿ ನಮ್ಮ ಅನುಭವಕ್ಕೆ ನಿಲುಕುವುದಕ್ಕೂ ಮಣಿಬಾಲೆ ಕಾಲೆತ್ತರಿಸಿ ಚಾಚುತ್ತಾಳೆ. ಆಕಾಶಕ್ಕೆ ಇಲ್ಲ ಎಲ್ಲೆ ಎನ್ನುವ ಮಾತಿನ ವಾಚ್ಯಾರ್ಥವನ್ನೂ ಧ್ವನ್ಯರ್ಥವನ್ನೂ ಹೊಳೆಯಿಸುತ್ತಾಳೆ ಮಣಿಬಾಲೆ.

ಸುಜಾತಾ ಅವರ ಕಾದಂಬರಿಗೆ ಕೇಂದ್ರ ಮತ್ತು ಕೇಂದ್ರ ಪಾತ್ರಗಳಿದ್ದಿದ್ದರೆ ಕಾದಂಬರಿ ಇನ್ನೂ ಹೆಚ್ಚು ಸಂಗತವಾಗಿರುತ್ತಿತ್ತು ಎನ್ನುವ ಪ್ರಶ್ನೆ ಮೂಡಲು ಅವಕಾಶವಿದೆ. ಈ ಅಂಶವು ಅನೇಕ ಸಂಗತಿಗಳ ಕಡೆಗೆ ನಮ್ಮ ಗಮನ ಸೆಳೆಯುತ್ತದೆ. ಮೊದಲನೆಯದು ಹೆಣ್ಣುನೋಟ, ಅದರ ಅನನ್ಯತೆ, ಅದರ ಅಭಿವ್ಯಕ್ತಿ ಕ್ರಮ – ಈ ಎಲ್ಲವೂ ಹೆಣ್ಣಿನದ್ದೇ ಆದ ಅನನ್ಯ ದಾರಿಯೊಂದನ್ನು ಕಟ್ಟಿಕೊಳ್ಳುತ್ತಿದೆ. ಅದನ್ನು ಗ್ರಹಿಸುವ ಮನಸ್ಥಿತಿ ಇನ್ನೂ ನಮ್ಮಲ್ಲಿ ರೂಪುಗೊಳ್ಳಬೇಕಿದೆ. ಇದು ಕೇವಲ ಕಾವ್ಯಾಭಿವ್ಯಕ್ತಿಯ ಪ್ರಶ್ನೆ ಮಾತ್ರವಲ್ಲ, ಅನ್ಯರೊರೆದುದನೆ ಬರೆದುದನೆ ಬರೆದು ಬಿನ್ನಗಾದ ಮನದ ಪ್ರಶ್ನೆಯ ಜೊತೆಗೇ ಇದು ಹೆಣ್ಣಿನ ಅನುಭವ ದ್ರವ್ಯವು ಹುಡುಕಿಕೊಳ್ಳುತ್ತಿರುವ ಹೊಚ್ಚ ಹೊಸ ದಾರಿಯ ಪ್ರಶ್ನೆಯೂ ಹೌದು. ಸಾಹಿತ್ಯದ ಅಭಿಜಾತತೆಯ ಹಿನ್ನೆಲೆಯಲ್ಲಿ ಎಲ್ಲ ಹೊಸ ಅನುಭವವೂ ಹೊಸ ನುಡಿ ಕಟ್ಟೋಣವನ್ನು ಹುಡುಕುತ್ತದೆ ಎನ್ನುವುದು ಹೋದಾಗಿಯೂ ಅಷ್ಟೇ ಮಾತ್ರವಲ್ಲ ಎನ್ನುವುದು ಸ್ತ್ರೀವಾದಿಗಳ ನಿಲುವು. ದಮನಿತ ಲೋಕದ ಸೌಂದರ್ಯಮೀಮಾಂಸೆಯನ್ನು ಅದರ ರಾಜಕೀಯ, ಸಾಂಸ್ಕೃತಿಕ ನೆಲೆಗಳು ಇನ್ನೂ ಬಲಗೊಳಿಸುತ್ತವೆ ಎನ್ನುವ ಮೀಮಾಂಸೆಯ ನಿಲುವು ಇದು. ಕಾವ್ಯಮೀಮಾಂಸೆಯನ್ನೂ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೀಮಾಂಸೆಯನ್ನು ಅಖಂಡವಾಗಿಸುವ ಈ ಪ್ರಯತ್ನವನ್ನು ನಮ್ಮ ಉಡದ ಹಿಡಿತದ ಮೀಮಾಂಸಕಾರರು ಮತ್ತು ವಿಮರ್ಶಕರು ಇನ್ನಾದರೂ ತೆರೆದ ಮನಸ್ಸಿನಿಂದ ನೋಡಲೇಬೇಕೆಂದು ಒತ್ತಾಯಿಸುವ ಗಮನಾರ್ಹ ಕೃತಿಗಳಲ್ಲಿ 'ಮಣಿಬಾಲೆ'ಯೂ ಒಂದು. ಈ ತಾತ್ವಿಕತೆಯನ್ನು ಪಾಶ್ಚಾತ್ಯ ಕೃತಿಗಳ ಅನುವಾದದಿಂದ ಬಲಪಡಿಸುವ ಪ್ರಯತ್ನಗಳು ಒಂದು ಕಡೆಯಿದ್ದರೆ, ಮತ್ತೊಂದು ಕಡೆ ಈ ಎಲ್ಲದಕ್ಕೂ ಭಾರತೀಯ ತಳಹದಿಯನ್ನು ಹುಡುಕುವ ಪ್ರಯತ್ನಗಳೂ ಗಂಭೀರವಾಗಿ ನಡೆಯುತ್ತಿವೆ. ಸುಜಾತಾ ಅವರ ಮಣಿಬಾಲೆ